# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 640 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಕೆ. ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3) | ಉತ್ತರಿಸಬೇಕಾದ ದಿನಾಂಕ | 19–09–2022 |
| 4) | ಉತ್ತರಿಸುವವರು | ಮಾನ್ಯ ಉನ್ನತ ಶಿಕ್ಷಣ, ಐಟಿ–ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು. |

************

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ NCVT ಯೋಜನೆಯನ್ನು ಪಡೆದು 7 ವರ್ಷ ಪೂರೈಸಿರುವ ಎಲ್ಲಾ ಐ.ಟಿ.ಐ ಗಳ ಸಿಬ್ಬಂದಿಗಳಿಗೆ ಪುನಃ ವೇತನ ಅನುದಾನ ನೀಡುವ ಯೋಜನೆ ಸರ್ಕಾರದ ಮುಂದಿದೆಯೇ; | ಇರುವುದಿಲ್ಲ. |
| ಆ) | ಐ.ಟಿ.ಐ ಸಿಬ್ಬಂದಿಗಳಿಗೆ ಎಷ್ಟು ವರ್ಷದವರೆಗೆ ಅನುದಾನ ನೀಡಲಾಗಿದೆ ಹಾಗೂ ಸ್ಥಗಿತಗೊಳಿಸಲು ಕಾರಣವೇನು; | ಪ್ರಸ್ತುತ ವೇತನ ಸಹಾಯಾನುದಾನಕ್ಕೆ ಒಳಪಟ್ಟ ಸಿಬ್ಬಂದಿಗಳು ವಯೋನಿವೃತ್ತಿ / ಮರಣ / ರಾಜೀನಾಮೆ ನೀಡುವವರೆಗೆ ವೇತನ ಸಹಾಯಾನುದಾನ ನೀಡಲಾಗುತ್ತಿದೆ.<br><br>ಆರ್ಥಿಕ ಇಲಾಖೆಯು 2010ನೇ ಸಾಲಿನಲ್ಲಿ ಅರ್ಹವಿದ್ದ 108 ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ 670 ಸಿಬ್ಬಂದಿಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಮಂಜೂರಾತಿ ನೀಡುತ್ತಾ, ಇನ್ನು ಮುಂದೆ ಯಾವುದೇ ಕೈಗಾರಿಕಾ ತರಬೇತಿ ಕೇಂದ್ರವನ್ನು 1997 ರ ಅನುದಾನ ಸಂಹಿತೆಯ ಅಡಿ ವೇತನಾನುದಾನಕ್ಕೆ ಒಳಪಡಿಸತಕ್ಕದ್ದಲ್ಲವೆಂದು ಷರತ್ತು ವಿಧಿಸಿದೆ. ರಾಜ್ಯದ ಆರ್ಥಿಕ ಸ್ಥಿತಿಗತಿಯನ್ನು ಪರಿಗಣಿಸಿ ಆರ್ಥಿಕ ಇಲಾಖೆಯು ತೆಗೆದುಕೊಂಡ ತೀರ್ಮಾನದನ್ವಯ ಪ್ರಸ್ತುತ ಹೊಸದಾಗಿ ಯಾವುದೇ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ವೇತನ ಸಹಾಯಾನುದಾನಕ್ಕೆ ಒಳಪಡಿಸುವುದನ್ನು ನಿಲ್ಲಿಸಲಾಗಿದೆ. |

**ಸಂಖ್ಯೆ: ಕೌಉಜೀಇ 84 ಕೈತಪ್ರ 2022**

(ಡಾ. ಅಶ್ವಥ್ ನಾರಾಯಣ ಸಿ.ಎನ್.)
ಉನ್ನತ ಶಿಕ್ಷಣ, ಐಟಿ–ಬಿಟಿ, ವಿಜ್ಞಾನ ಮತ್ತು
ತಂತ್ರಜ್ಞಾನ, ವಿದ್ಯುನ್ಮಾನ ಮತ್ತು
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.